# ಮೆಲ್ಲ ಮೆಲ್ಲನೆ ಬಂದನೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Note:** Singer has mostly followed these wordings.

ರಾಗ: ಮೋಹನ ತಾಳ: ಆದಿ

ಮೆಲ್ಲ ಮೆಲ್ಲನೆ ಬಂದನೆ ಗೋಪಮ್ಮ ಕೇಳೆ
ಮೆಲ್ಲ ಮೆಲ್ಲನೆ ಬಂದನೆ || ಪ ||

ಮೆಲ್ಲ ಮೆಲ್ಲನೆ ಬಂದು ಗಲ್ಲಕ್ಕೆ ಮುದ್ದು ಕೊಟ್ಟು
ನಿಲ್ಲದೆ ಓಡಿ ಪೋದ ಕಳ್ಳಗೆ ಬುದ್ದಿ ಪೇಳೆ || ಅಪ ||

ಹಾಲು ಮಾರಲು ಪೋದರೆ ನಿನ್ನಯ ಕಂದ
ಕಾಲಿಗಡ್ಡವ ಕಟ್ಟಿದ
ಹಾಲ ಸುಂಕವ ಬೇಡಿ ಕೋಲನ್ನ ಅಡ್ಡ ಕಟ್ಟಿ
ಶಾಲೆಯ ಸೆಳಕೊಂಡು ಹೇಳದೋಡಿದ ಕೃಷ್ಣ || 1 ||

ಮೊಸರ ಮಾರಲು ಪೋದರೆ ನಿನ್ನಯ ಕಂದ
ಹೆಸರೇನೆಂದೆಲೆ ಕೇಳಿದ
ಹಸನಾದ ಹೆಣ್ಣ ಮೇಲೆ ಕುಸುಮವ ತಂದಿಕ್ಕಿ
ಶಶಿ ಮುಖಿಯರಿಗೆಲ್ಲ ಬಸಿರು ಮಾಡಿದನೀತ || 2 ||

ಹೋಗಿರೆ ರಂಗಯ್ಯನ ಮೇಲೆ ನೀವು
ದೂರೇನು ಕೊಂಡು ಬಂದಿರೆ
ಯೋಗೀಶ ಪುರಂದರ ವಿಠ್ಠಲ ರಾಯನ ತೂಗಿ
ಪಾಡಿರೆ ಬೇಗ ನಾಗವೇಣಿಯರೆಲ್ಲ || 3 ||

**Classification:** Keerthane

**Ankita:** purandara vittala

**Location:** NA

**Category:** Krishna Leele

**Sub-Category:** Krishna, gopi, kalla, buddi, mosaru, ranga, hennu,

**Pravachana:** NA

**Explanation:** NA